# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 276 (325) |
| ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11.12.2024 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದ ಲೋಕೋಪಯೋಗಿ ಇಲಾಖೆ, ನಂ.2 ಉತ್ತರ ಉಪ ವಿಭಾಗ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರು ಮತ್ತು ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರು ಸಂಖ್ಯೆ ಎಷ್ಟು; ಸದರಿ ಉಪ ವಿಭಾಗದಲ್ಲಿ ಮಂಜೂರಾತಿ ಇರುವ ಹುದ್ದೆಗಳು ಎಷ್ಟು ಈ ಹೊರಗುತ್ತಿಗೆ ನೌಕರರು ಮತ್ತು ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರಿಗೆ ಯಾವ ಯಾವ ಕಾರ್ಯಭಾರವನ್ನು ವಹಿಸಲಾಗಿದೆ | ಲೋಕೋಪಯೋಗಿ ಇಲಾಖೆ, ನಂ.2 ಉತ್ತರ ಉಪ ವಿಭಾಗ, ಬೆಂಗಳೂರು ಇಲ್ಲಿ ಒಟ್ಟು 6 ಹೊರಗುತ್ತಿಗೆ ನೌಕರರು ಹಾಗೂ 1 ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಈ ಉಪವಿಭಾಗದಲ್ಲಿ ಒಟ್ಟು 16 ಮಂಜೂರಾತಿ ಹುದ್ದೆಗಳು ಇರುತ್ತವೆ. ಹೊರಗುತ್ತಿಗೆ ನೌಕರರು ಮತ್ತು ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರಿಗೆ ಗ್ರೂಪ್ ಸಿ ಮತ್ತು ಗ್ರೂಪ್-ಡಿ ಹುದ್ದೆಗೆ ಅನುಗುಣವಾಗಿ ಕಾರ್ಯಭಾರವನ್ನು ವಹಿಸಲಾಗಿದೆ. |
| ಆ | ಸರ್ಕಾರದ ಆದೇಶ ಸಂಖ್ಯೆ: ಲೆಇಟಿ.ಎಫ್‌ಸಿ: 2018, ದಿನಾಂಕ:22.03.2019ರಂತೆ ಮಂಜೂರಾದ ಖಾಲಿಯಿರುವ ಹುದ್ದೆಗಳಿಗೆದುರಾಗಿ ಮಾತ್ರ ಹೊರಗುತ್ತಿಗೆ ಮೇಲೆ ನೇಮಕಾತಿ ಮಾಡಿಕೊಳ್ಳುಬಹುದೆಂದು ಆದೇಶವಿದ್ದರೂ ಹೆಚ್ಚುವರಿಯಾಗಿ ಹೊರಗುತ್ತಿಗೆ ನೌಕರರು ನೇಮಿಸಿಕೊಂಡಿರುವುದರಿಂದ ಅಧಿಕ ಆರ್ಥಿಕ ವೆಚ್ಚವಾಗುವುದಿಲ್ಲವೇ ಹಾಗೂ ಸದರಿ ಸರ್ಕಾರಿ ಆದೇಶದಂತೆ ಸರ್ಕಾರ ನಿಯಮನುಸಾರ ಕ್ರಮ ಕೈಗೊಳ್ಳಲಾಗುವುದೇ ? | ಲೋಕೋಪಯೋಗಿ ಇಲಾಖೆ. ನಂ. 2 ಉತ್ತರ ಉಪ ವಿಭಾಗ, ಬೆಂಗಳೂರು ವ್ಯಾಪ್ತಿಯಲ್ಲಿ ಪ್ರಸ್ತುತ 2 ಗ್ರೂಪ್-ಡಿ ಹುದ್ದೆಗಳು ಖಾಲಿ ಇದ್ದು, 2 ಗ್ರೂಪ್- ಡಿ ನೌಕರರನ್ನು ಮಂಜೂರಾತಿ ಹುದ್ದೆಗಳಿಗೆ ಎದುರಾಗಿ ಹೊರಗುತ್ತಿಗೆ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ.<br><br>ಹಾಗೂ ಈ ಉಪ ವಿಭಾಗದಡಿ ಯಾಂತ್ರಿಕ ಕಾರ್ಯಗಾರ, ಪೆಟ್ರೋಲ್ ಬಂಕ್ ಮತ್ತು ಸುಮಾರು 35ಕ್ಕೂ ಹೆಚ್ಚು ವಾಹನಗಳ ನಿರ್ವಹಣೆ ಮಾಡುತ್ತಿರುವುದರಿಂದ ಮೆಕಾನಿಕ್ ಹಾಗೂ ಕಂಪ್ಯೂಟರ್ ಆಪರೇಟರ್ ರವರುಗಳನ್ನು ಹಾಗೂ ಈ ಉಪ ವಿಭಾಗಕ್ಕೆ ಮಂಜೂರಾದ ಚಾಲಕರ ಹುದ್ದೆ ಇಲ್ಲದ ಕಾರಣ ಕಛೇರಿ ಕೆಲಸ ನಿರ್ವಹಣೆಗಾಗಿ ಹೆಚ್ಚುವರಿಯಾಗಿ 3 ಹೊರುಗತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ. |

ಸಂಖ್ಯೆ: ಲೋಇ 230 ಸೇಇಸಿ 2024

(ಸತೀಶ್ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು